# ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ನಾಗಮಂಗಲ

**ಸಿಸಿ.ನಂ.571/2023**

| | | | |
|---|---|---|---|
| ಸಾಕ್ಷಿದಾರರು | : | ತಮ್ಮಣ್ಣ | ಸಿ.ಡಬ್ಲ್ಯೂ : **4** |
| ತಂದೆ /ಗಂಡನ ಹೆಸರು | : | ತಿಪ್ಪೇಸ್ವಾಮಿ | ಪಿ.ಡಬ್ಲ್ಯೂ : **1** |
| ವಯಸ್ಸು | : | **59** ವರ್ಷ | |
| ವೃತ್ತಿ | : | ನಿರ್ವಾಹಕ | |
| ವಾಸ ಸ್ಥಳ | : | ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ. | |

ಸಾಕ್ಷಿಯನ್ನು ದಿನಾಂಕ **23-07-2024** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಚಾ.ಸಾ.**1** ರಿಂದ **3** ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು. ನಾನು ಚಿತ್ರದುರ್ಗ ಕೆ.ಎಸ್.ಆರ್.ಟಿ.ಸಿ. ಘಟಕದಲ್ಲಿ ನಿರ್ವಾಹಕನಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಜೂನ್ **2023** ರಲ್ಲಿ ಕೆಎ-**16** ಎಫ್-**0016** ಸಂಖ್ಯೆಯ ಕೆ.ಎಸ್.ಆರ್.ಟಿ.ಸಿ. ಬಸ್ ಮೈಸೂರಿನಿಂದ ಚಿತ್ರದುರ್ಗಕ್ಕೆ ಹೋಗುವಾಗ ನಾನು ಸದರಿ ಬಸ್ ನಿರ್ವಾಹಕನಾಗಿದ್ದೆ. ಸದರಿ ಬಸ್ ಮೇಲೆ ಆರೋಪಿ ಚಾಲಕರಾಗಿದ್ದರು. ನಮ್ಮ ಬಸ್ ನಾಗಮಂಗಲ ಮೂಲಕ ಚಿತ್ರದುರ್ಗಕ್ಕೆ ಹೋಗುತ್ತಿತ್ತು. ನಾಗಮಂಗಲ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ಪ್ರಯಾಣಿಕರನ್ನು ಇಳಿಸಿ ಹತ್ತಿಸಿಕೊಂಡು ನಮ್ಮ ಬಸ್ ಹೊರಟಿದ್ದು, ಬಸ್ ನಿಲ್ದಾಣದಿಂದ ಸುಮಾರು **5** ಮೀಟರ್ ನಷ್ಟು ನಮ್ಮ ಬಸ್ಸು ಹೊರಗೆ ಬಿದ್ದ ತಕ್ಷಣ ಒಂದು ಜೋರಾದ ಶಬ್ದವಾಯಿತು. ಆ ಸಮಯದಲ್ಲಿ ನಾನು ಪ್ರಯಾಣಿಕರನ್ನು ಹತ್ತಿಸಿಕೊಂಡು ಹಿಂದಿನ ಬಾಗಿಲು ಹಾಕಿಕೊಂಡು ಸದರಿ ಬಾಗಿಲ ಹತ್ತಿರವಿದ್ದೆ. ಶಬ್ದವಾದ ನಂತರ ಬಸ್ ತಕ್ಷಣ ನಿಲ್ಲಿಸಿದ್ದು, ನಾನು ಇಳಿದು ಬಸ್ ಮುಂಭಾಗಕ್ಕೆ ಹೋಗಿ ನೋಡಿದಾಗ ಬಸ್ಸಿನ ಬಲ ಮುಂಭಾಗದ ಮುಂದಿನ ಚಕ್ರದ ಹತ್ತಿರ ಒಂದು ಬೈಕ್ ಡಿಕ್ಕಿಯಾಗಿ ಕೆಳಗಡೆ ಬಿದ್ದಿತ್ತು. ಸದರಿ ಬೈಕ್ ಮೇಲೆ ಪ್ರಯಾಣಿಸುತ್ತಿದ್ದ ವ್ಯಕ್ತಿಗೆ ಆಟೋದಲ್ಲಿ ತಕ್ಷಣ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಮ್ಮ ಬಸ್ ಗೆ ಡಿಕ್ಕಿಯಾದ ಬೈಕ್ ನಂಬರ್ ಗೊತ್ತಿಲ್ಲ. ನಾನು

ಹಿಂದಿನಿಂದ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದು, ಅಲ್ಲಿಂದ ಸದರಿ ವ್ಯಕ್ತಿಗೆ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಆದ್ದರಿಂದ ಸದರಿ ವ್ಯಕ್ತಿಗೆ ಏನು ಗಾಯಗಳಾಗಿದ್ದವು ಗೊತ್ತಿಲ್ಲ. ಸದರಿ ವ್ಯಕ್ತಿಗೆ ಯಾರು ಉಪಚರಿಸಿದರು ಗೊತ್ತಿಲ್ಲ. ಆ ಸಮಯದಲ್ಲಿ ಆರೋಪಿ ಬಸ್ ನಿಲ್ದಾಣದಿಂದ ನಿಧಾನಕ್ಕೆ ಬಸ್ ಚಾಲನೆ ಮಾಡಿಕೊಂಡು ರಸ್ತೆಯ ಮೇಲೆ ಹೋಗುತ್ತಿದ್ದರು. ನಾನು ಬಸ್ ಹಿಂಭಾಗದಲ್ಲಿ ಇದ್ದ ಕಾರಣ ಸದರಿ ಬೈಕ್ ಚಾಲಕ ಹೇಗೆ ವಾಹನ ಚಾಲನೆ ಮಾಡುತ್ತಿದ್ದರು ಗೊತ್ತಿಲ್ಲ. ನಾನು ಈ ವಿಚಾರದಲ್ಲಿ ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಎರಡು ಫೋಟೋಗಳು ನೋಡುತ್ತಿದ್ದು, ಅದರಲ್ಲಿ ಸದರಿ ದಿನ ಆರೋಪಿ ಚಾಲನೆ ಮಾಡುತ್ತಿದ್ದ ಹಾಗೂ ನಾನು ನಿರ್ವಾಹಕನಾಗಿದ್ದ ಬಸ್ ಇರುತ್ತದೆ. ಸದರಿ ಎರಡು ಫೋಟೋಗಳನ್ನು ಒಟ್ಟಾಗಿ ನಿ.ಪಿ.1 ಎಂದು ಗುರುತಿಸಲಾಯಿತು. ಎರಡು ಫೋಟೋಗಳು ನೋಡುತ್ತಿದ್ದು, ಅದರಲ್ಲಿ ಸದರಿ ದಿನ ಬಸ್ ಗೆ ಡಿಕ್ಕಿಯಾದ ಬೈಕ್ ಇರುತ್ತದೆ. ಸದರಿ ಎರಡು ಫೋಟೋಗಳನ್ನು ಒಟ್ಟಾಗಿ ನಿ.ಪಿ.2 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಎಪಿಪಿ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

<u>ಪಾಟೀ ಸವಾಲುಃ ಎಪಿಪಿ ರವರಿಂದಃ</u>

ದಿನಾಂಕಃ**06-06-2023** ರಂದು ಅಪಘಾತವಾಗಿದೆ ಎಂದರೆ ನೆನಪಿಲ್ಲ. ಅಪಘಾತದ ಸಮಯದಲ್ಲಿ ಆರೋಪಿ ನಮ್ಮ ಬಸ್ಸನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಸಾಕ್ಷಿ 2 ರವರು ನಿಧಾನವಾಗಿ ಚಾಲನೆ ಮಾಡುತ್ತಿದ್ದ ಬೈಕ್ ಗೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾ.ಸಾ.2 ರವರು ಬೈಕ್ ಸಮೇತ ತನ್ನ ಬಲಭಾಗಕ್ಕೆ ಬಿದ್ದಾಗ ಆರೋಪಿ ಮತ್ತು ಚಾ.ಸಾ.3 ರವರು ಅವರಿಗೆ ಉಪಚರಿಸಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಅಪಘಾತದಲ್ಲಿ ಚಾ.ಸಾ.2 ರವರ ತಲೆಯ ಬಲಭಾಗಕ್ಕೆ, ಎಡ ಎದೆಗೆ, ಎಡಗಾಲಿನ ಮಂಡಿಗೆ ಪೆಟ್ಟಾಗಿ ತೀವ್ರ ಸ್ವರೂಪದ ಗಾಯಗಳಾಗಿತ್ತು ಎಂದರೆ ಗೊತ್ತಿಲ್ಲ. ಚಾ.ಸಾ.2 ರವರು

ಚಾಲನೆ ಮಾಡುತ್ತಿದ್ದ ಬೈಕ್ ಸಹ ಜಖಂ ಗೊಂಡಿತ್ತು ಹಾಗೂ ಅದರ ಎರಡು ನಂಬರ್ ಪ್ಲೇಟ್ ಗಳು ಮುರಿದು ಕಿತ್ತುಹೋಗಿದ್ದವು ಎಂದರೆ ಗೊತ್ತಿಲ್ಲ. ಸದರಿ ಬೆಕ್ ನಂ. ಕೆಎ-**45** ಇ-**6752** ಎಂದರೆ ಗೊತ್ತಿಲ್ಲ. ಚಾ.ಸಾ.**2** ರವರಿಗೆ ಆಟೋದಲ್ಲಿ ಚಾ.ಸಾ.**3** ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದರೆ ಸಾಕ್ಷಿ ನಾವೇ ಆಟೋದಲ್ಲಿ ಹತ್ತಿಸಿ ಕಳುಹಿಸಿದ್ದೇವೆ. ಅಪಘಾತದ ಆರೋಪಿಯ ಅತೀವೇಗ ಮತ್ತು ಅಜಾಗರೂಕತೆಯ ಬಸ್ ಚಾಲನೆಯಿಂದ ಆಗಿದೆ ಎಂದರೆ ಸರಿಯಲ್ಲ. ಅಪಘಾತ ಆರೋಪಿಯ ಸಂಪೂರ್ಣ ತಪ್ಪಿನಿಂದ ಆಗಿದ್ದರೂ ಸಹ, ಆರೋಪಿ ನನ್ನ ಸಹೋದ್ಯೋಗಿ ಆದ ಕಾರಣ ಆರೋಪಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ- ಇಲ್ಲ.

ಮರು ವಿಚಾರಣೆ ಃ ಇಲ್ಲ.

( ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).

ಸಾ.ಓ.ಹೇ.ಕೆ.ಸ.ಇ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ನಾಗಮಂಗಲ